# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 870 ಗ್ರಾಪಂಅ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 17-11-2020.

ಕರ್ನಾಟಕ ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 58, 61A, 75, 76, 84, 89, 90, 91, 92, 99, 104, 105, 106, 108, 109 ಮತ್ತು 110ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿ) ನಿಯಮಗಳು, 2020ರ ಕರಡನ್ನು ದಿನಾಂಕ:17-09-2020ರ ಕರ್ನಾಟಕ ರಾಜ್ಯ ಪತ್ರದ ಭಾಗ-IV-A ರಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:17-09-2020 ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಾರದಿರುವುದರಿಂದ;

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 311ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಸಮಿತಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಇವು ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆಬರುತ್ತದೆ.

**2. ಪರಿಭಾಷೆಗಳು.-** ಈ ನಿಯಮಗಳಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ.-

(ಎ) "ಅಧಿನಿಯಮ" ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993. (1993 ರ ಕರ್ನಾಟಕ ಅಧಿನಿಯಮ ಸಂಖ್ಯೆ 14);

(ಬಿ) “ಅಧ್ಯಕ್ಷರು” ಎಂದರೆ ಸಂಬಂಧಪಟ್ಟ ಗ್ರಾಮದ ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯರುಗಳಿಂದ ಗ್ರಾಮ ಪಂಚಾಯತಿ ಮೂಲಕ ಆಯ್ಕೆಯಾದ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ ಅಧ್ಯಕ್ಷ;

(ಸಿ) “ಉಪಾಧ್ಯಕ್ಷರು” ಎಂದರೆ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಯ ಉಪಾಧ್ಯಕ್ಷ (ಸಮಿತಿಯ ಸದಸ್ಯರುಗಳಿಂದ ಆಯ್ಕೆಯಾದ ಆ ಗ್ರಾಮದ ಗ್ರಾಮ ಪಂಚಾಯತಿ ಒಬ್ಬ ಸದಸ್ಯ);

(ಡಿ) “ಗ್ರಾಮ” ಎಂದರೆ ಕಂದಾಯ ಇಲಾಖೆಯು ಗುರುತಿಸಿರುವ ಕಂದಾಯ ಗ್ರಾಮ ಹಾಗೂ ಅದರೊಡನೆ ಹೊಂದಿಕೊಂಡಿರುವ ಉಪಗ್ರಾಮಗಳು; ಮತ್ತು

(ಇ) “ಸಮಿತಿ” ಎಂದರೆ ನಿಯಮ 3 ರಡಿಯಲ್ಲಿ ರಚಿಸಲ್ಪಟ್ಟ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ.

(ಎಫ್) “ಸಮಿತಿ ಕಾರ್ಯದರ್ಶಿ” ಈ ಗ್ರಾಮದ ವ್ಯಾಪ್ತಿಯ ಆಶಾ ಕಾರ್ಯಕರ್ತೆ (ಒಬ್ಬರಿಗಿಂತ ಹೆಚ್ಚು ಆಶಾ ಕಾರ್ಯಕರ್ತೆಯರಿದ್ದರೆ ಹಿರಿತನ ಮತ್ತು ಅರ್ಹತೆಯ ಮೇಲೆ ಸಮಿತಿಯು ಆಯ್ಕೆ ಮಾಡಿದ ಆಶಾ ಕಾರ್ಯಕರ್ತೆ).

**3. ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಯ ರಚನೆ.-** (1) ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು.-

| ಕ್ರ.ಸಂ | ಸದಸ್ಯರು | ಪದನಾಮ |
|---|---|---|
| (1) | ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರಲ್ಲಿ ಗ್ರಾಮ ಪಂಚಾಯತಿಯು ಆಯ್ಕೆ ಮಾಡಿದ ಸದಸ್ಯ. | ಅಧ್ಯಕ್ಷರು |
| (2) | ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರಲ್ಲಿ ಗ್ರಾಮ ಪಂಚಾಯತಿಯು ಆಯ್ಕೆ ಮಾಡಿದ ಸದಸ್ಯ. (ಸದಸ್ಯರು ಇಬ್ಬರಿಗಿಂತ ಹೆಚ್ಚಾದಲ್ಲಿ ಗ್ರಾಮ ಪಂಚಾಯತಿ ಮೂಲಕ ಆಯ್ಕೆ ಮಾಡುವುದು) | ಉಪಾಧ್ಯಕ್ಷರು |
| (3) | ಗ್ರಾಮ ಸಭೆಯಿಂದ ಆಯ್ಕೆಯಾದ ಈ ಕೆಳಕಂಡ ವರ್ಗದ 15 ಸದಸ್ಯರು, ಇವರಲ್ಲಿ ಕನಿಷ್ಟ 8 ಜನ ಮಹಿಳೆಯರು, ಕನಿಷ್ಟ3 ಅನುಸೂಚಿತ ಜಾತಿ ಅನುಸೂಚಿತ ಪಂಗಡದವರು, ಇಬ್ಬರು ಸ್ತ್ರೀಶಕ್ತಿ ಸ್ವಸಹಾಯ ಸಂಘದ ಸದಸ್ಯರು, ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆಗೆ ಸಂಬಂಧಿಸಿದ ವಿಷಯದಲ್ಲಿ ಪರಿಣಿತಿಯುಳ್ಳ, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿ ಒಬ್ಬರು, ಗ್ರಾಮದ ಯುವತಿ/ಯುವಕ ಮಂಡಳದ ಪ್ರತಿನಿಧಿ- ತಲಾ ಒಬ್ಬರು. | ಸದಸ್ಯರು |
| (4) | ಆಯಾ ಗ್ರಾಮಕ್ಕೆ ಸಂಬಂಧಿಸಿದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಕಿರಿಯ ಪುರುಷ ಆರೋಗ್ಯ ಸಹಾಯಕ, ಪ್ರಾಥಮಿಕ ಶಾಲಾ ಶಿಕ್ಷಕರು-ಒಬ್ಬರು (ಮಹಿಳೆಯರಿಗೆ ಆದ್ಯತೆ), ಗ್ರಾಮದಲ್ಲಿರುವ ಎಲ್ಲಾ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು. | ಪದನಿಮಿತ್ತ ಸದಸ್ಯರು |

| | | |
|---|---|---|
| (5) | ಗ್ರಾಮದ ವ್ಯಾಪ್ತಿಯ ಆಶಾ ಕಾರ್ಯಕರ್ತೆಯರಲ್ಲಿ ಸಮಿತಿಯು ಆಯ್ಕೆ ಮಾಡಿದ ಆಶಾ ಕಾರ್ಯಕರ್ತೆ. | ಸದಸ್ಯ ಕಾರ್ಯದರ್ಶಿ |

(2) ಸಮಿತಿಯ ಯಾವೊಬ್ಬ ಸದಸ್ಯರಿಗೂ ಗೌರವಧನ ಅಥವಾ ಇತರೆ ಸಂಭಾವನೆ ಇರುವುದಿಲ್ಲ.

**4. ಸದಸ್ಯತ್ವದ ಅವಧಿ.-** (1) ಈ ಸಮಿತಿಯಲ್ಲಿನ ಗ್ರಾಮ ಪಂಚಾಯತಿ ಸದಸ್ಯರುಗಳ ಅವಧಿ ಸಮಿತಿ ರಚನೆಯಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯಾಗಿರತಕ್ಕದ್ದು. ಅಥವಾ ಗ್ರಾಮ ಪಂಚಾಯತಿಯು, ಯಾವುದಾದರೂ ಕಾರಣಗಳಿಂದ ಅದರ ಅವಧಿಯು ಮುಕ್ತಾಯವಾದಲ್ಲಿ ಇದರಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಕಾರ್ನಿರ್ವಹಿಸುವುದು.

(2) ಸಮಿತಿಯ ನಾಮನಿರ್ದೇಶಿತ ಸದಸ್ಯರುಗಳ ಅವಧಿಯು ನಾಮನಿರ್ದೇಶಿತ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಇರತಕ್ಕದ್ದು, ಗ್ರಾಮ ಪಂಚಾಯತಿಯ ಅವಧಿಯು ಮುಕ್ತಾಯವಾದರೂ ಮತ್ತೆ ಗ್ರಾಮ ಪಂಚಾಯತಿಯ ರಚನೆಯಾಗುವವರೆಗೂ, ಸಮಿತಿಯ ಇತರ ಸದಸ್ಯರುಗಳು ಸಮಿತಿಯ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

**5. ಸಮಿತಿಯ ಕಾರ್ಯವಿಧಾನ.-(1)** ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಯ ಪ್ರತಿ ತಿಂಗಳಿಗೊಮ್ಮೆ ಸಭೆ ಸೇರುವುದು ಅಥವಾ ಅವಶ್ಯವಿದ್ದಾಗ ಅದ್ಯಕ್ಷರು ಮೂರು ದಿನಗಳು ಮುಂಚಿತವಾಗಿ ನೋಟೀಸ್ ನೀಡಿ ವಿಶೇಷ ಸಭೆ ಕರೆಯಬಹುದು.

2) ಸಮಿತಿಯ ಸಭೆಯು ಕೋರಂ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ 1/3 ಭಾಗದ ಸದಸ್ಯರು ಆಗಿರತಕ್ಕದ್ದು.

3) ಈ ಸಮಿತಿಯು ತೆಗೆದುಕೊಂಡ ನಿರ್ಣಗಳನ್ನು ಸಮಿತಿಯ ಕಾರ್ಯದರ್ಶಿಯು ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳ ಸಮೇತ ಗ್ರಾಮ ಪಂಚಾಯತಿಗೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೇಲಧಿಕಾರಿಗಳಿಗೆ ವರದಿ ಮಾಡುವುದು.

**6. ಸಮಿತಿಯ ಉದ್ದೇಶಗಳು.-** (1) ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶದ ಮಹತ್ವದ ಬಗ್ಗೆ ತಿಳುವಳಿಕೆ ಮೂಡಿಸುವುದು.

2) ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕಾಂಶದ ಬಗ್ಗೆ ಇರುವ ಸರ್ಕಾರದ ಯೋಜನೆಗಳ ಬಗ್ಗೆ ಜನರಲ್ಲಿ ಅರಿವು ಮುಡಿಸುವುದು. ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಯೋಜನೆಗಳ ಬಗ್ಗೆ ಸರ್ಕಾರದ ಪ್ರಚಾರ ಸಾಮಗ್ರಿಗಳನ್ನು ಪ್ರಚುರಪಡಿಸುವುದು. ಶಾಲೆ, ಅಂಗನವಾಡಿ, ಆಸ್ಪತ್ರೆಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ತಿಳುವಳಿಕೆ ಮೂಡಿಸುವುದು.

3) ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕಾಂಶದ ಬಗ್ಗೆಇರುವ ಸರ್ಕಾರದ ಯೋಜನೆಗಳ ಪ್ರಯೋಜನಗಳು ಜನರಿಗೆ ತಲುಪುವಂತೆ ಮಾಡುವುದು.

4) ಗ್ರಾಮದಲ್ಲಿ ಆರೋಗ್ಯ ಯೋಜನೆಗಳ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಗ್ರಾಮ ಸಭೆಯಲ್ಲಿ ಅರ್ಹ ಫಲಾನುಭವಿಗಳ ಆಯ್ಕೆಗೆ ಕ್ರಮ ವಹಿಸುವುದು.

5) ಹೆಚ್ಐವಿ/ಏಡ್ಸ್ ಮತ್ತಿತರ ಸೋಂಕು ರೋಗಗಳ ಬಗ್ಗೆ ಇರುವ ತಪ್ಪು ತಿಳುವಳಿಕೆ ಹೋಗಲಾಡಿಸಿ ಅವುಗಳನ್ನು ತಡೆಗಟ್ಟುವ ಕೆಲಸದಲ್ಲಿ ಜನರ ವಿಶ್ವಾಸ ಮತ್ತು ಪಾಲುದಾರಿಕೆ ಹೆಚ್ಚಿಸುವುದು.

6) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕಾಂಶದ ಯೋಜನೆಗಳ ಅನುಷ್ಠಾನದಲ್ಲಿ ಸಮುದಾಯದ ಸಹಬಾಗಿತ್ವ ಪಡೆಯುವುದು.

**7. ಸಮಿತಿಯ ಪ್ರಕಾರ್ಯಗಳು.-** 1) ಗ್ರಾಮದಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕತೆಯ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿ ವಸ್ತುಸ್ಥಿತಿ ವರದಿ ಸಿದ್ಧಪಡಿಸುವುದು.

2) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆಯ ಸ್ಥಿತಿಗತಿಗಳಲ್ಲಿ ಇರುವ ಕೊರತೆಗಳ ಬಗ್ಗೆ ಪಟ್ಟಿ ಮಾಡುವುದು.

3) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆ ಬಗ್ಗೆ ವಾರ್ಷಿಕ ಸಮಗ್ರ ಕ್ರಿಯಾ ಯೋಜನೆ ತಯಾರಿಸುವುದು.

4) ಗ್ರಾಮದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆ ಬಗ್ಗೆ ಸರ್ಕಾರದ ವಿವಿಧ ಯೋಜನೆಗಳಲ್ಲಿ ದೊರಕುವ ಸೌಲಭ್ಯಗಳ ಬಗ್ಗೆ, ಕ್ರಿಯಾ ಯೋಜನೆಯಲ್ಲಿ ಅವಕಾಶ ಕಲ್ಪಿಸುವುದು.

5) ಕೊರತೆ ಇರುವ ಸಂಪನ್ಮೂಲವನ್ನು ಸಾರ್ವಜನಿಕ ವಂತಿಗೆ, ಸಹಭಾಗಿತ್ವಗಳಿಂದ ಪಡೆಯಲು ಕ್ರಮ ಕೈಗೊಳ್ಳುವುದು.

6) ಗ್ರಾಮದ ಎಲ್ಲಾ ಜನರಿಗೆ ಶುದ್ಧವಾದ ಕುಡಿಯುವ ನೀರು ದೊರೆಯುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

7) ಗ್ರಾಮದ ಪ್ರತೀ ಕುಟುಂಬಗಳಿಗೂ ಶೌಚಾಲಯ ಇರುವ ಬಗ್ಗೆ ಮತ್ತು ಬಳಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

8) ಗ್ರಾಮದ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ, ಅಂಗನವಾಡಿಗಳಲ್ಲಿ ಪೌಷ್ಠಿಕ ಆಹಾರ ದೊರಕುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

9) ಗ್ರಾಮದ ಗರ್ಭಿಣಿಯರು, ಬಾಣಂತಿಯರಿಗೆ ದೊರಕುತ್ತಿರುವ ಪೌಷ್ಠಿಕ ಆಹಾರದ ಸೇರಿದಂತೆ ಎಲ್ಲಾ ಸೌಲಭ್ಯಗಳು ದೊರಕುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

10) ಗ್ರಾಮದ ಎಲ್ಲಾ ಪ್ರದೇಶದಲ್ಲಿ ರಸ್ತೆ, ಚರಂಡಿ, ಸಾರ್ವಜನಿಕ ಸ್ಥಳಗಳಲ್ಲಿ ಶುಚಿತ್ವ ಕಾಪಾಡುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

11) ಗ್ರಾಮದ ವ್ಯಾಪ್ತಿಯ ಸಾರ್ವಜನಿಕ ಕೆರೆ, ಕುಂಟೆ, ತೆರೆದ ಬಾವಿ, ಕೊಳವೆ ಬಾವಿಗಳಲ್ಲಿ (ಬೋರ್‌ವೆಲ್) ನೀರು ಮಲೀನವಾಗದಂತೆ ಕ್ರಮ ಕೈಗೊಳ್ಳಯವುದು.

12) ಪ್ರತಿ ತಿಂಗಳ ಮೂರನೇ ಶನಿವಾರದಂದು, ಗ್ರಾಮದಲ್ಲಿ 'ಗ್ರಾಮ ಆರೋಗ್ಯ ಮತ್ತು ಪೌಷ್ಠಿಕ ದಿನ' ಆಚರಿಸಿ ಗ್ರಾಮಸ್ಥರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕ್ರಮ ವಹಿಸುವುದು.

13) ಗ್ರಾಮದಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಎಲ್ಲಾ ಮಕ್ಕಳನ್ನು ಪ್ರಾರಂಭಿಕ ಹಂತದಲ್ಲೆ ಪತ್ತೆ ಹಚ್ಚಿ ಅಂತಹ ಮಕ್ಕಳಿಗೆ ಹತ್ತಿರದ ಪೌಷ್ಠಿಕ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ/ ಉಪಚಾರ ಮಾಡಿಸಿ, ಆ ಮಕ್ಕಳು ಗ್ರಾಮಕ್ಕೆ ಹಿಂತಿರುಗಿದ ನಂತರ ಅವರು ಸಾಮಾನ್ಯ ಪೌಷ್ಠಿಕ ಮಟ್ಟ ತಲುಪುವವರೆಗೆ ನಿಗಾವಹಿಸುವುದು.

14) ಗ್ರಾಮದಲ್ಲಿ ಅಂಗನವಾಡಿಯು ನೀಡಿತ್ತಿರುವ ಸೇವೆಗಳನ್ನು ಮೇಲ್ವಿಚಾರಣೆ ನಡೆಸುವುದು ಮತ್ತು ಗ್ರಾಮದ ಮಹಿಳೆಯರ ಮತ್ತು ಮಕ್ಕಳ ಪೌಷ್ಠಿಕ ಮಟ್ಟವನ್ನು ಉತ್ತಮಪಡಿಸಲು ಸಹಕರಿಸುವುದು.

15) ಗ್ರಾಮದಲ್ಲಿ ಸಾಂಕ್ರಾಮಿಕ ರೋಗಗಳ ನಿವಾರಣೆಗೆ ಸಾರ್ವತ್ರಿಕ ಚುಚ್ಚುಮದ್ದು ಕಾರ್ಯಕ್ರಮ ನಿಯಮಿತವಾಗಿ ನಡೆಯುವಂತೆ ಕ್ರಮ ವಹಿಸುವುದು.

16) ಆರೋಗ್ಯ ಸಹಾಯಕರು (ಕಿರಿಯ ಆರೋಗ್ಯ ಸಹಾಯಕಿ/ಸಹಾಯಕ, ಆಶಾ ಕಾರ್ಯಕರ್ತೆಯರು) ನಿಯಮಿತವಾಗಿ ಗ್ರಾಮಕ್ಕೆ ಭೇಟಿ ನೀಡುವಂತೆ ನೋಡಿಕೊಳ್ಳಬೇಕು, ಆ ಮೂಲಕ ಜನರಿಗೆ ಆರೋಗ್ಯ ಸೇವೆ ಮತ್ತು ಸೌಲಭ್ಯಗಳ ಬಗ್ಗೆ ಮಾಹಿತಿ ಸಿಗುವಂತೆ ಮಾಡಬೇಕು.

17) ಗರ್ಭಿಣಿ ಮಹಿಳೆಯರಿಗೆ ತುರ್ತಾಗಿ ಆಸ್ಪತ್ರೆಗೆ ಹೋಗಬೇಕಾದ ವಾಹನ ಸೌಲಭ್ಯದ ವ್ಯವಸ್ಥೆ ಮಾಡುವುದು,

18) ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಬಾಲವಿಕಾಸ ಸಮಿತಿ ರಚಿಸುವುದು ಮತ್ತು ಅಂಗನವಾಡಿಗಳಿಗೆ ಬೇಕಾದ ಸಹಾಯ, ನೆರವು ನೀಡುವುದು ಹಾಗೂ ಮಕ್ಕಳಿಗೆ ಪೌಷ್ಠಿಕ ಆಹಾರ ಸರಿಯಾಗಿ ಸಿಗುವಂತೆ ಮಾಡಲು ಸಂಬಂಧಪಟ್ಟ ಇಲಾಖೆಯೊಡನೆ ಸಮನ್ವಯ ಸಾಧಿಸುವುದು.

19) ಗ್ರಾಮದ ಜನರಲ್ಲಿ ಹೆಣ್ಣು ಭ್ರೂಣ ಹತ್ಯೆ ಬಾಲ್ಯ ವಿವಾಹ, ಅನಕ್ಷರತೆ, ಬಾಲ ಕಾರ್ಮಿಕ ಪದ್ಧತಿ ಹೋಗಲಾಡಿಸಲು ಕ್ರಮ ಹಮ್ಮಿಕೊಳ್ಳುವುದು.

**8. ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ ಮುಕ್ತ ನಿಧಿಯ ನಿರ್ವಹಣೆ.-** (1) ಪ್ರತಿ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಗೆ ವಾರ್ಷಿಕ ಹತ್ತು ಸಾವಿರ ರೂಪಾಯಿಗಳ ಮುಕ್ತನಿಧಿ (ಅನಿರ್ಬಂಧಿತ ನಿಧಿ), ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ನೀಡಲಾಗುವುದು.

2) ಈ ನಿಧಿಯು ಸ್ಥಳೀಯ ಮಟ್ಟದಲ್ಲಿ ಕೈಗೊಳ್ಳುವ ಸಮುದಾಯ ಆರೋಗ್ಯ ಚಟುವಟಿಕೆಗಳಿಗೆ ಸಂಪನ್ಮೂಲವಾಗಿರುತ್ತದೆ. ಇದನ್ನು ಸಮುದಾಯ ಆರೋಗ್ಯ ಚಟುವಟಿಕೆಗಳಿಗೆ ಮಾತ್ರ ಒದಗಿಸಬೇಕು. ಈ ನಿಧಿಯನ್ನು ಬಳಸುವಾಗ ಜನಾರೋಗ್ಯ, ಪೌಷ್ಠಿಕತೆ, ಶಿಕ್ಷಣ ಮತ್ತು ನೈರ್ಮಲ್ಯ ಪರಿಸರ ಸಂರಕ್ಷಣೆಯಂತಹ ವಲಯಗಳಿಗೆ ಹೆಚ್ಚು ಆದ್ಯತೆ ನೀಡಬೇಕು.

3) ಕೆಲವೊಂದು ಸಾಮಾನ್ಯ ಚಟುವಟಿಕೆಗಳಾದ ಗ್ರಾಮ ಮಟ್ಟದ ಸ್ವಚ್ಛತಾ ಚಟುವಟಿಕೆ, ನೈರ್ಮಲ್ಯ ಚಟುವಟಿಕೆಗಳು, ಆರೋಗ್ಯ ಚಟುವಟಿಕೆಗಳು, ಅಂಗನವಾಡಿ ಕೇಂದ್ರದ ಮಟ್ಟದ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು, ಮನೆ ಮನೆ ಸಮೀಕ್ಷೆ, ರೋಗವಾಹಕ ಮೂಲಗಳನ್ನು ಕಡಿಮೆಗೊಳಿಸುವುದು, ತುರ್ತು ಸಮಯದಲ್ಲಿ ಸಾರಿಗೆ ವ್ಯವಸ್ಥೆ ಸೇವೆಗಳು (ಆರೋಗ್ಯ ಕವಚ ಸೇವೆ ಲಭ್ಯವಿಲ್ಲದಿದ್ದಲ್ಲಿ), ಮಾಹಿತಿ ಮತ್ತು ಶಿಕ್ಷಣ ಮತ್ತು ಸಂವಹನದ ಚಟುವಟಿಕೆಗಳು ಮತ್ತು ಕಾಲಕಾಲಕ್ಕೆ ಅಭಿಯಾನ ನಿರ್ದೇಶಕರು (ಎನ್ ಹೆಚ್ ಎಮ್) ಮತ್ತು ಯೋಜನಾ ನಿರ್ದೇಶಕರು (ಆರ್‌ಸಿಹೆಚ್) ನೀಡುವ ನಿರ್ದೇಶನದಂತೆ ಮುಕ್ತ ನಿಧಿಯನ್ನು ಬಳಸಬಹುದಾಗಿದೆ.

4) ಈ ನಿಧಿಯನ್ನು ಸುತ್ತು ನಿಧಿಯನ್ನಾಗಿಯೂ ಬಳಸಬಹುದು, ಬಳಸುವ ಸಂದರ್ಭದಲ್ಲಿ, ಯಾವ ಕುಟುಂಬವು ಪಡೆದಿರುತ್ತದೆಯೇ, ಆ ಕುಟುಂಬದಿಂದ ಸಮಯಕ್ಕೆ ಸರಿಯಾಗಿ ವಂತಿಕೆಯನ್ನು ಕಂತುಗಳಲ್ಲಿ ಹಿಂಪಡೆಯಲು ಕ್ರಮ ಕೈಗೊಳ್ಳಬೇಕು.

5) ವಿಶೇಷ ಸಂದರ್ಭಗಳಲ್ಲಿ ಅಂದರೆ ನಿರ್ಗತಿಕ ಮಹಿಳೆ ಅಥವಾ ಅತಿ ಬಡ ಕುಡುಂಬದವರಿಗೆ ಈ ನಿಧಿಯನ್ನು ನೀಡಿದ್ದರೆ, ಸಮಿತಿಯು ಚರ್ಚಿಸಿ ತೀರ್ಮಾನ ಕೈಗೊಂಡು ವಿನಾಯಿತಿ ನೀಡಬಹುದು.

6) ಪ್ರತೀ ಸಮಿತಿಯು ಹತ್ತು ಸಾವಿರ ಮುಕ್ತ ನಿಧಿಯ ಜೊತೆಗೆ ಸಮಿತಿಯ ಉದ್ದೇಶಗಳನ್ನು ಈಡೇರಿಸಲು ಸಮುದಾಯದಿಂದ ವಂತಿಗೆಯನ್ನು ಪಡೆಯುವ ಸಂಪೂರ್ಣ ಸ್ವಾತಂತ್ರ್ಯವನ್ನು ಸಮಿತಿಯು ಹೊಂದಿರುತ್ತದೆ.

**9.ಬ್ಯಾಂಕ್ ಖಾತೆಗಳ ನಿರ್ವಹಣೆ.- (**1) ಸಮಿತಿಗೆ ನೀಡುವ ಮುಕ್ತ ನಿಧಿಯನ್ನು, ಈ ಸಮಿತಿಯು ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕಿನ ಜಂಟಿ ಖಾತೆಗೆ ಜಮಾ ಮಾಡುವುದು.

2) ಇದನ್ನು ಸಮಿತಿಯ ಸದಸ್ಯ ಕಾರ್ಯದರ್ಶಿ (ಆಶಾ ಕಾರ್ಯಕರ್ತೆ) ಮತ್ತು ಅಧ್ಯಕ್ಷರ ಜಂಟಿ ಸಹಿಯೋದಿಗೆ ನಿರ್ವಹಿಸಬೇಕು.

3) ಜಂಟಿ ಖಾತೆಯ ನಿರ್ವಹಣೆಯನ್ನು ಸಂಪೂರ್ಣವಾಗಿ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ ಅದರಲ್ಲೂ ವಿಶೇಷವಾಗಿ ಆಶಾ ಕಾರ್ಯಕರ್ತೆಯ ಜವಾಬ್ದಾರಿಯಾಗಿರುತ್ತದೆ.

4) ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಯು ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ಸಾರ್ವಜನಿಕರಿಂದ ಪಡೆದ ವಂತಿಗೆಯ ಖರ್ಚಿಗೆ ಸಂಬಂಧಿಸಿದಂತೆ ಪ್ರತ್ಯೇಕ ವಹಿಯನ್ನು ನಿರ್ವಹಿಸುವುದು.

5) ಈ ವಹಿಯು ಸಾರ್ವಜನಿಕ ಪರಿಶೀಲನೆಗೆ (ಸಾಮಾಜಿಕ ಪರಿಶೋಧನೆ) ಮುಕ್ತವಾಗಿರಬೇಕು.

6) ಈ ವಹಿಯನ್ನು ಕಾಲಕಾಲಕ್ಕೆ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ/ ಹಿರಿಯ ಮಹಿಳಾ ಅಥವಾ ಪುರುಷ ಆರೋಗ್ಯ ಸಹಾಯಕರು/ಗ್ರಾಮ ಪಂಚಾಯತ್ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಪರೀಶೀಲಿಸಬೇಕು.

7) ಇದರ ವರದಿಯನ್ನು ಗ್ರಾಮ ಪಂಚಾಯತಿ ಸಭೆಯ ಮುಂದೆ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

**(ಬಿ. ನವೀನ್ ಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ, (ಜಿ.ಪಂ.) (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ